ಈ) ಕಳೆದ ಮೂರು ವರ್ಷಗಳಲ್ಲಿ ಬೆಳಗಾಂ ಜಿಲ್ಲಾ ಸಹಕಾರಿ ಬ್ಯಾಂಕ್ ನಿಯಮಿತ, ಇದರ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸಹಕಾರ ಕಾಯ್ದೆ ಕಲಂ 64ರ ವಿಚರಣೆ ಅಥವಾ ಕಲಂ 66ರ ತನಿಖೆ ಇಲ್ಲದೇ ಯಾವುದಾದರೂ ಇಲಾಖಾ ತನಿಖೆ/ವಿಚಾರಣೆ ಮಾಡಲಾಗಿದೆಯೇ? ಹಾಗಿದ್ದಲ್ಲಿ, (ವಿವರ ನೀಡುವುದು)

–ಇಲ್ಲ–

ಉ) ಕಳೆದ ಮೂರು ವರ್ಷಗಳಿಂದ ಬೆಳಗಾಂ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಷ್ಟದಲ್ಲಿದೆಯೇ?

ಕಳೆದ ಮೂರು ವರ್ಷಗಳಿಂದ ಬೆಳಗಾಂ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ನಷ್ಟದಲ್ಲಿರುವುದಿಲ್ಲ.

ಊ) ಹಾಗಿದ್ದಲ್ಲಿ ಅದಕ್ಕೆ ಜವಾಬ್ದಾರರು ಹಾಗೂ ಅವರ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು?

ಅನ್ವಯಿಸುವುದಿಲ್ಲ.

ಸಂಖ್ಯೆ: ಸಿಒ 35 ಸಿಸಿಬಿ 2009

ಸಹಿ/–
(ಲಕ್ಷ್ಮಣ ಸ. ಸವದಿ)
ಸಹಕಾರ ಸಚಿವರು

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

<u>ಕರ್ನಾಟಕ ವಿಧಾನ ಸಭೆ</u>

410 ಶ್ರಿ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)

ಅ) ರಾಜ್ಯದಲ್ಲಿ ತಾಲ್ಲೂಕಿಗಿಂತಲೂ ಕಡಿಮೆ ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳೆಷ್ಟು? ಹಾಗೂ ಇವುಗಳ ಹೆಸರು ಮತ್ತು ವಿಳಾಸ ನೀಡುವುದು.

ದಿನಾಮಕ 31.03.2008ಕ್ಕೆ ಇದ್ದಂತೆ ರಾಜ್ಯದಲ್ಲಿ ತಾಲ್ಲೂಕಿಗಿಂತಲೂ ಕಡಿಮೆ ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳು 29630 ಇರುತ್ತವೆ.

ಆ) ಇವುಗಳಲ್ಲಿ ನಿಷ್ಕ್ರಿಯ ಸಹಕಾರಿ ಸಂಘಗಳೆಷ್ಟು? ಹಾಗೂ ಕ್ರಿಯಾಶೀಲ ಸಹಕಾರ ಸಂಘಗಳೆಷ್ಟು? ಈ ಸಂಘಗಳು ನಿಷ್ಕ್ರಿಯಗೊಳ್ಳಲು ಕಾರಣಗಳೇನು?

ಇವುಗಳಲ್ಲಿ ನಿಷ್ಕ್ರಿಯ ಸಹಕಾರ ಸಂಘಗಳು 2072 ಇದ್ದು, ಕ್ರಿಯಾಶೀಲ ಸಹಕಾರ ಸಂಘಗಳು 25636 ಇರುತ್ತವೆ.

ಸಂಘಗಳು ನಿಷ್ಕ್ರಿಯಗೊಳ್ಳಲು ಹಲವಾರು ಕಾರಣಗಳಿದ್ದು, ಅವುಗಳಲ್ಲಿ ಮುಖ್ಯವಾದವುಗಳು;

1. ಬೆಳೆಗೆ ಉತ್ತಮ ಬೆಲೆ ದೊರೆಯದೆ ಕಾರಣ ಸಾಲ ವಸೂಲಾತಿ ಕುಂಠಿತವಾಗಿರುತ್ತದೆ.

2. ಸಂಘಗಳಲ್ಲಿ ಕಾಲಕಾಲಕ್ಕೆ ನಡೆದಿರುವ ಹಣದುರುಪಯೋಗ ಪ್ರಕರಣಗಳು ಹೆಚ್ಚುತ್ತಿರುವುದರಿಂದ

3. ಸಂಘಗಳ ವ್ಯವಹಾರದ ನಿರ್ವಹಣೆ ಸರಿಯಿಲ್ಲದ ಕಾರಣ

ಇ) ಕಳೆದ 3 ವರ್ಷಗಳಿಂದ ವರ್ಷವಾರು ಆಡಿಟ್ ಮಾಡಲಾಗಿರುವ ತಾಲ್ಲೂಕಿಗಿಂತಲೂ ಕಡಿಮೆ ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳೆಷ್ಟು?(ವಿವರ ನೀಡುವುದು) ಇದೇ ಅವಧಿಯಲ್ಲಿ ತಾಲ್ಲೂಕಿಗಿಂತಲೂ ಕಡಿಮೆ ಮಟ್ಟದ ಕಾರ್ಯ ವ್ಯಾಪ್ತಿಯಲ್ಲಿ, ಪುನರ್ ಆಡಿಟ್ ಮಾಡಲಾಗಿರುವ ಸಂಘಗಳೆಷ್ಟು?

(ವಿವರ ನೀಡುವುದು)

ಕಳೆದ 3 ವರ್ಷಗಳಿಂದ ವರ್ಷಾವಾರು ಆಡಿಟ್ ಮಾಡಲಾಗಿರುವ ತಾಲ್ಲೂಕಿಗಿಂತ ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳ ವಿವರ ಕೆಳಕಂಡಂತಿರುತ್ತದೆ.

1-4-2005 ರಿಂದ 31-3-2006

ವಿವರ	ಸಂಘಗಳ ಕಾರ್ಯಸ್ಥಿತಿ			ಒಟ್ಟು
	ಕಾರ್ಯ ನಿರತ	ನಿಷ್ಕ್ರಿಯ	ಸಮಾಪನಾ	
ಲೆಕ್ಕ ಪರಿಶೋಧನೆಗೆ ಇದ್ದ ಸಹಕಾರ ಸಂಘಗಳ ಸಂಖ್ಯೆ	1689	254	215	2158
ಲೆಕ್ಕ ಪರಿಶೋಧನೆ ಆದ ಸಹಕಾರ ಸಂಘಗಳ ಸಂಖ್ಯೆ	1384	72	79	1535
ಉಳಿಕೆ	**305**	**182**	**136**	**623**

1-4-2006 ರಿಂದ 31-3-2007

ವಿವರ	ಸಂಘಗಳ ಕಾರ್ಯಸ್ಥಿತಿ			ಒಟ್ಟು
	ಕಾರ್ಯ	ನಿಷ್ಕ್ರಿಯ	ಸಮಾ	

	ನಿರತ		ಪನಾ	
ಲೆಕ್ಕ ಪರಿಶೋಧನೆಗೆ ಇದ್ದ ಸಹಕಾರ ಸಂಘಗಳ ಸಂಖ್ಯೆ	24498	2466	2311	26275
ಲೆಕ್ಕ ಪರಿಶೋಧನೆ ಆದ ಸಹಕಾರ ಸಂಘಗಳ ಸಂಖ್ಯೆ	18017	776	1088	19881
ಉಳಿಕೆ	**6481**	**1690**	**1223**	**9394**

1-4-2007 ರಿಂದ 31-3-2008

ವಿವರ	ಸಂಘಗಳ ಕಾರ್ಯಸ್ಥಿತಿ			ಒಟ್ಟು
	ಕಾರ್ಯ ನಿರತ	ನಿಷ್ಕ್ರಿಯ	ಸಮಾಪನಾ	
ಲೆಕ್ಕಪರಿಶೋಧನೆಗೆ ಇದ್ದ ಸಹಕಾರ ಸಂಘಗಳ ಸಂಖ್ಯೆ	24460	2384	2037	28881
ಲೆಕ್ಕಪರಿಶೋಧನೆ ಆದ ಸಹಕಾರ ಸಂಘಗಳ ಸಂಖ್ಯೆ	16805	590	749	18144
ಉಳಿಕೆ	**7655**	**1794**	**1288**	**10737**

ಕಳೆದ ಮೂರು ವರ್ಷಗಳಲ್ಲಿ ಲೆಕ್ಕಪರಿಶೋಧನೆಯಾಗಿರುವ ತಾಲ್ಲೂಕಿಗಿಂತಲೂ ಕಡಿಮೆ ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳ ಪುನರ್ ಆಡಿಟ್ ಕಳೆದ ಮೂರು ವರ್ಷಗಳಲ್ಲಿ ನಡೆದಿರುವುದಿಲ್ಲ.

ಈ) ಪುನರ್ ಆಡಿಟ್ ಮಾಡಿದ ತಾಲ್ಲೂಕಿಗಿಂತಲೂ ಕಡಿಮೆ ಮಟ್ಟದ ಕಾರ್ಯ ವ್ಯಾಪ್ತಿಯ ಸಹಕಾರ ಸಂಘಗಳಲ್ಲಿ ಯಾವ ಲೋಪದೋಷಗಳನ್ನು ಕಂಡು ಹಿಡಿಯಲಾಗಿದೆ? ಹಾಗೂ ಏನು ಕ್ರಮ ತೆಗೆದು ಕೊಳ್ಳಲಾಗಿದೆ?

ಪುನರ್ ಆಡಿಟ್ ನಡೆಯದೇ ಇರುವುದರಿಂದ ಅನ್ವಯಿಸುವುದಿಲ್ಲ.

ಉ) ಕಳೆದ 3 ವರ್ಷಗಳಿಂದ ವರ್ಷಾವಾರು ಆಡಿಟ್ ಮಾಡಿದ ತಾಲ್ಲೂಕಿಗಿಂತಲೂ ಕಡಿಮೆ ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳ ಪೈಕಿ ಪುನರ್ ಆಡಿಟ್ ಮಾಡಲಾದ ಸಹಕಾರ ಸಂಘಗಳಲ್ಲಿ ಮೂಲ ಆಡಿಟ್‌ನಲ್ಲಿಲ್ಲದ ಲೋಪದೋಷಗಳು ಕಂಡುಬಂದಿದ್ದರೆ ಆಡಿಟ್ ಮಾಡಿದ ಅಧಿಕಾರಿಗಳ ಹಾಗೂ ಮೇಲ್ವಿಚಾರಣೆ ಮಾಡಿದ ಅಧಿಕಾರಿಗಳ ಮೇಲೆ ಏನು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ? (ವಿವರ ನೀಡುವುದು)

ಪುನರ್ ಆಡಿಟ್ ನಡೆಯದೇ ಇರುವುದರಿಂದ ಅನ್ವಯಿಸುವುದಿಲ್ಲ.

ಸಂಖ್ಯೆ: ಸಿಓ 41 ಸಿಎಲ್‌ಎಂ 2009

ಸಹಿ/–
(ಲಕ್ಷ್ಮಣ. ಸ. ಸವದಿ)
ಸಹಕಾರ ಸಚಿವರು.

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

412 ಶ್ರೀ ಪುಟ್ಟೇಗೌಡ ಸಿ.ಎಸ್. (ಶ್ರವಣಬೆಳಗೊಳ)

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು

ಅ) ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು; ಈ ಕೇಂದ್ರಗಳು ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿವೆಯೇ;

ರಾಜ್ಯದಲ್ಲಿ ಒಟ್ಟು 54260 ಅಂಗನವಾಡಿ ಕೇಂದ್ರಗಳು, 405 ಮಿನಿ ಅಂಗನವಾಡಿ ಕೇಂದ್ರಗಳಿವೆ. 30817 ಕೇಂದ್ರಗಳಿಗೆ ಮಾತ್ರ ಸ್ವಂತ ಕಟ್ಟಡವಿರುತ್ತದೆ.

ಆ) ಹಾಗಿದ್ದಲ್ಲಿ, ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿರುವ ಅಂಗನವಾಡಿ ಕೇಂದ್ರಗಳೆಷ್ಟು; ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿರುವ ಕೇಂದ್ರಗಳೆಷ್ಟು (ತಾಲ್ಲೂಕುವಾರು ಮಾಹಿತಿ ನಿಡುವುದು);

30817 ಕೇಂದ್ರಗಳು ಸ್ವಂತ ಕಟ್ಟಡದಲ್ಲಿ ನಡೆಯುತ್ತಿವೆ. ಹಾಗೂ 25848 ಅಂಗನವಾಡಿ ಕೇಂದ್ರಗಳು ಇತರೆ ಕಟ್ಟಡಗಳಲ್ಲಿ ನಡೆಯುತ್ತಿವೆ. (ತಾಲ್ಲೂಕುವಾರು ಮಾಹಿತಿ ಅನುಬಂಧ–1 ರಲ್ಲಿ ನೀಡಿದೆ)

ಇ) ರಾಜ್ಯದಲ್ಲಿ ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭ ಮಾಡಲು ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಲಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ಕೇಂದ್ರಗಳನ್ನು ಪ್ರಾರಂಭ ಮಾಡಲಾಗುವುದು (ತಾಲ್ಲೂಕುವಾರು ವಿವರ ನೀಡುವುದು)?

ರಾಜ್ಯದಲ್ಲಿ ಹೊಸದಾಗಿ 5786 ಅಂಗನವಾಡಿ ಕೇಂದ್ರಗಳು ಹಾಗೂ 2926 ಮಿನಿ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರದ ಪತ್ರ ದಿನಾಂಕ:11–12–08 ರಂದು ಮಂಜೂರಾತಿ ದೊರೆತಿದೆ. (ತಾಲ್ಲೂಕುವಾರು ವಿವರವನ್ನು ಅನುಬಂಧ–2 ರಲ್ಲಿ ನೀಡಿದೆ). ಸದರಿ ಮಂಜೂರಾತಿಯನ್ವಯ ಅವಶ್ಯ ಕ್ರಮವನ್ನು ಕೈಗೊಳ್ಳಲಾಗುವುದು.

ಸಂಖ್ಯೆ:ಮಮಇ:57:ಐಸಿಡಿ:2009

(ಪಿ.ಎಂ.ನರೇಂದ್ರಸ್ವಾಮಿ)
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು.